ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಕಮಲಾಪುರದ್ದು ಅರ್ಧವಾಗಿದೆ.

ಅಧ್ಯಕ್ಷರು : ಅವರು ಮಾಡುತ್ತಾರೆ, ಬಿಡಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಈಗ ಕಮಲಾಪುರದ್ದು ಇರಬಹುದು. ಮತ್ತೆ ಮಾನ್ಯ ಕೃಷ್ಣಮೂರ್ತಿಯವರು ಹೇಳಿದಂಥಾದ್ದು ಇರಬಹುದು. ಅದು ಏನು ಸ್ಪೆಸಿಫಿಕ್ ಇಷ್ಯೂ ಇದೆ. ಅದನ್ನು ನನಗೆ ಕೊಡಲಿ, ಇಮ್ಮೀಡಿಯಟ್ ಆಗಿ ನಾನು ಅಟೆಂಡ್ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗ ಮೊದಲನೆಯದಾಗಿ ಶಾಸಕರುಗಳಿಗೆ ಹೊಸ ಅಂಬೇಡ್ಕರ್ ಭವನಕ್ಕೆ ಆಯ್ಕೆ ಮಾಡುವಂತಹ ವಿಚಾರವನ್ನು ಬಜೆಟ್‌ನಲ್ಲಿ ತಿಳಿಸಿದ್ದೀರಿ, ದಯವಿಟ್ಟು ಇಲ್ಲಿ ಮಾನ್ಯ ಶಾಸಕರುಗಳು ಕೊಡುವಂತಹ ಶಿಫಾರಸ್ಸುಗಳ ಆಧಾರದ ಮೇಲೆ, ಆ ಸ್ಥಳವನ್ನೇ ಆಯ್ಕೆ ಮಾಡಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಈ ನಮ್ಮ ಮಲೆನಾಡು ಜಿಲ್ಲೆಗಳಲ್ಲಿ ತಾಲ್ಲೂಕುಗಳ ಸಂಖ್ಯೆ ಜಾಸ್ತಿ ಇದೆ. ನಮ್ಮ ಜಿಲ್ಲೆಯಲ್ಲಿ 11 ತಾಲ್ಲೂಕುಗಳು, 6 ವಿಧಾನ ಸಭಾ ಕ್ಷೇತ್ರ, ಈ ರೀತಿ ಇರುವುದರಿಂದ ತಾಲ್ಲೂಕುಗಳಿಗೆ ಒಂದು ಅಂಬೇಡ್ಕರ್ ಭವನವನ್ನು ಕೊಡಲೇಬೇಕು. ಆ ರೀತಿಯಲ್ಲಿ ಸರ್ಕಾರ ನಮ್ಮ ಈ ಮಲೆನಾಡು ಪ್ರದೇಶಗಳಿಗೆ ವಿಶೇಷವಾದ ಆದ್ಯತೆಯ ಮೇಲೆ ತಾಲ್ಲೂಕಿಗೆ ಒಂದು ಅಂಬೇಡ್ಕರ್ ಭವನವನ್ನು ಕೊಡುವಂತೆ ಯೋಚನೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎರಡು ವಿಚಾರಗಳನ್ನು ಹೇಳಿದ್ದಾರೆ. ಒಂದು ಭವನಕ್ಕೆ ಜಾಗವನ್ನು ಗುರುತು ಮಾಡುವಂತಹ ಅವಕಾಶ ಎಂಎಲ್‌ಎಗಳಿಗೆ ಇರಬೇಕೆಂದು ಹೇಳಿದ್ದಾರೆ. ಈಗ ಸಾಧಾರಣವಾಗಿ ಅದನ್ನೇ ಮಾಡಿಕೊಂಡು ಬಂದಿರುವಂಥಾದ್ದು. ಅವರಿಗೆ ಬೇಕಾದರೆ ಒಂದು ಸ್ಪೆಷಲ್ ಇನ್‌ಸ್ಟ್ರಕ್ಷನ್ ಇವರು ಹೇಳಿದಂತಹ ಜಾಗದಲ್ಲೇ ಮಾಡಿ, ಎಂದು ಆದೇಶವನ್ನು ನಾಳೆಯೇ ಅಧಿಕಾರಿಗಳಿಗೆ ಕೊಡೋಣ.

ಶ್ರೀ ಎಂ. ಚಂದ್ರಪ್ಪ : ಜನರಲ್ಲಾಗಿ ಹೇಳಿ,

ಶ್ರೀ ಎ. ಕೃಷ್ಣಪ್ಪ : ನಾನು ಜನರಲ್ಲಾಗಿ ಹೇಳಿರುವುದು.

ಅಧ್ಯಕ್ಷರು : ಎಲ್ಲರಿಗೂ ಅಪ್ಲೈ ಆಗುತ್ತದೆ ತಾವು ಕುಳಿತುಕೊಳ್ಳಿ.

ಶ್ರೀ ಎ. ಕೃಷ್ಣಪ್ಪ : ಎಲ್ಲರಿಗೂ ಜನರಲ್ಲಾಗಿ ಅದೇ ಇರುವುದು, ಮಾನ್ಯ ಸದಸ್ಯರು ಏನೋ ಅನುಮಾನದಲ್ಲಿ ಹೇಳುತ್ತಿದ್ದಾರೆ. ಅದಕ್ಕೆ ಹೇಳಿದೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಿರುವಂತಹ ವಿಚಾರವನ್ನು ನಾನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟವರಿಗೆ ನಾನು ಸೂಚನೆಯನ್ನು ಕೊಡುತ್ತೇನೆ.

ತುರುವೇಕೆರೆ ತಾಲ್ಲೂಕು ಬ್ಯಾಲಹಳ್ಳಿ ಗೇಟ್ ಅಥವಾ ಗಿರನಹಳ್ಳಿಯಲ್ಲಿ ಪಶು ಚಿಕಿತ್ಸಾ ಕೇಂದ್ರಗಳ ಪ್ರಾರಂಭ

541 (4764) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ವಡವನಗಟ್ಟ ಪಂಚಾಯ್ತಿ ಅಥವಾ ಬ್ಯಾಲಹಳ್ಳಿ ಗೇಟ್ ಹಾಗೂ ಸಂಪಿಗೆ ಪಂಚಾಯ್ತಿಯ ಗಿರೆನಹಳ್ಳಿ ಗ್ರಾಮದಲ್ಲಿ ಪಶುಚಿಕಿತ್ಸಾ ಆಸ್ಪತ್ರೆಗಳನ್ನು ತೆರೆಯಲು ಜನರಿಂದ ಅರ್ಜಿಗಳು ಬಂದಿದೆಯೇ;

ಆ) ಅರ್ಜಿಗಳು ಬರದಿದ್ದರೂ ಇಲ್ಲಿ ಆಸ್ಪತ್ರೆ ತೆರೆಯಲು ತುಂಬಾ ಅವಶ್ಯಕತೆ ಇದ್ದು, ಜಾನುವಾರುಗಳಿಗೆ ತೊಂದರೆಯಾಗಿರುವುದು ಸರ್ಕಾರ ಗಮನಿಸಿಲ್ಲವೇ;

ಇ) ಹಾಗಿದ್ದಲ್ಲಿ, ಈ ವರ್ಷ ಈ ಎರಡು ಗ್ರಾಮಗಳಿಗೆ ಪಶುಆಸ್ಪತ್ರೆ ಮಂಜೂರು ಮಾಡಲಾಗುವುದೇ;

ಈ) ಯಾವಾಗ ಮಾಡಲಾಗುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಬಂದಿದೆ.

ಆ) 1997ರ ಜಾನುವಾರುಗಣತಿ ಪ್ರಕಾರ ತುರುವೇಕೆರೆ ತಾಲ್ಲೂಕಿನ ವಡವನಗಟ್ಟ ಪಂಚಾಯತ್ ಅಥವಾ ಬ್ಯಾಲಹಳ್ಳಿ ಗೇಟ್ ಮತ್ತು ಸಂಪಿಗೆ ಪಂಚಾಯತ್‌ನ ಗಿರೆನಹಳ್ಳಿಯಲ್ಲಿ ಕ್ರಮವಾಗಿ 467, 561 ಮತ್ತು 367 ಜಾನುವಾರು ಘಟಕಗಳು ಇರುತ್ತವೆ. ಆದ್ದರಿಂದ ಜಾನುವಾರುಗಳ ಸಂಖ್ಯೆ ಕಡಿಮೆ ಇರುವುದರಿಂದ ಪಶುವೈದ್ಯ ಸಂಸ್ಥೆ ತೆರೆಯಲು ಕ್ರಮ ಕೈಕೊಂಡಿರುವುದಿಲ್ಲ.

ಇ) ಹೊಸ ಪಶು ಆಸ್ಪತ್ರೆಗಳನ್ನು ಮಂಜೂರು ಮಾಡುವ ಕಾರ್ಯಕ್ರಮವಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಮಾನ್ಯ ಅಧ್ಯಕ್ಷರೆ ಮಾನ್ಯ ಮಂತ್ರಿಗಳು ಉತ್ತರ ಓದಗಿಸಿದ್ದಾರೆ. ಕಳೆದ 10–12 ವರ್ಷಗಳಿಂದಲೂ ಕೆಲವು ಹಳ್ಳಿಗಳಿಗೆ ಪಶು ಆಸ್ಪತ್ರೆಗಳನ್ನು ಕೊಡಬೇಕೆಂಬ ಮನವಿಯನ್ನು ನಾವು ಸದನದಲ್ಲಿ ಪ್ರಸ್ತಾಪ ಮಾಡುತ್ತಲೇ, ಇದ್ದೇವೆ. ಮಾನ್ಯ ಮಂತ್ರಿಯವರು ಇಲ್ಲ. ಅವಶ್ಯಕತೆ ಇರುವುದಿಲ್ಲ. ಮಾಡುವುದಕ್ಕೆ ಆಗುವುದಿಲ್ಲವೆನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಈ ವಿಚಾರವನ್ನು ನಾವು ಬರಗಾಲದ ಬಗ್ಗೆ ಮಾತನಾಡುವಾಗಲೂ ಹೇಳಿದ್ದೇವೆ. ಜಾನುವಾರುಗಳನ್ನು ಬೇರೆ ಕಡೆಗಳಿಗೆ ತೆಗೆದುಕೊಂಡು ಹೋಗಬೇಕಾದಂತಹ ವಿಚಾರವನ್ನು ನಾನು ಈಗಾಗಲೇ ಹೇಳಿದ್ದೇನೆ. ಈಗ ನಾನು ಯಾವ ಭಾಗಗಳಲ್ಲಿ ಅವಶ್ಯಕತೆ ಇದೆಯೆಂದು ಕೇಳಿದ್ದೇನೆ. ಅವು ವಡವನಗಟ್ಟ, ಬ್ಯಾಲಹಳ್ಳಿ ಹಾಗೂ ಸಂಪಿಗೆ ಪಂಚಾಯ್ತಿಯ ಗಿರೆನಹಳ್ಳಿಯಲ್ಲಿ ಕೇಳಿದ್ದೇನೆ. ಇವೂ ಅಲ್ಲದೇ ಕಣತೂರ್, ಗೋಣಿ ತುಮಕೂರು, ಇಲ್ಲಿ ಪ್ರಮುಖವಾಗಿ ಬೇಕಾಗಿರುವಂತಹ ಪಶು ಆಸ್ಪತ್ರೆಗಳು, ನಾನು ಮಾನ್ಯ ಮಂತ್ರಿಯವರಲ್ಲೂ ಸಹ ಪರ್ಸೋನಲ್ ಆಗಿ ಈ ವಿಚಾರವನ್ನು ಮಾತನಾಡಿದ್ದೇನೆ. ದಯಮಾಡಿ ಆಸ್ಪತ್ರೆಗಳನ್ನು ಕೂಡಲೇ ಬೇಕೆಂದು ಕೇಳಿದ್ದೇನೆ. ಅನೇಕ ಕಡೆಗಳಲ್ಲಿ ಬಹಳ ಹಿಂಸೆಯಾಗಿದೆ. 10–12 ಕಿ.ಲೋ ಮೀಟರ್ ಆ ಜಾನುವಾರುಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಅವುಗಳಿಗೆ ಚಿಕಿತ್ಸೆ ಮಾಡಲಿಕ್ಕೆ ಹಿಂಸೆಯಾಗುತ್ತದೆ. ಅದಕ್ಕೋಸ್ಕರವಾದರೂ ವಿಶೇಷವಾಗಿ ಈ ಹಳ್ಳಿಗಳಿಗೆ ಪಶು ಚಿಕಿತ್ಸಾ ಕೇಂದ್ರಗಳನ್ನು ಮಾಡಿಕೊಡಬೇಕೆಂದು ನಾನು ಆಗ್ರಹಪಡಿಸುತ್ತೇನೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಈಗ ಸದ್ಯದಲ್ಲಿ ಹೊಸ ಆಸ್ಪತ್ರೆಗಳನ್ನು ತೆಗೆಯುವಂತಹ ಉದ್ದೇಶ ಸರ್ಕಾರಕ್ಕೆ ಇಲ್ಲ. ಈಗಾಗಲೇ ಸಾಕಷ್ಟು ಸಂಸ್ಥೆಗಳು ಇವೆ. ಅದಕ್ಕೆ ಸಿಬ್ಬಂದಿಗಳ ಕೊರತೆ ಇದೆ. ಆದುದರಿಂದ ಹೊಸ ಆಸ್ಪತ್ರೆಗಳನ್ನು ತೆರೆಯುವಂತಹ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ ನಾವು ಈಗಾಗಲೇ ಸುಮಾರು 747 ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಿದ್ದೇವೆ ಈಗ ಮತ್ತೆ 200 ಚಿಕಿತ್ಸಾ ಕೇಂದ್ರಗಳನ್ನು ತಕ್ಷಣದಲ್ಲೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮತ್ತೆ 250 ಡಾಕ್ಟರ್‌ಗಳನ್ನು ನೇಮಕ ಮಾಡುವುದಕ್ಕೆ ಸರ್ಕಾರ ಆದೇಶವನ್ನು

ಕೊಡುತ್ತಿದೆ. ಇದನ್ನು ರೋಸ್ಟರ್ ಕಂ ಮೇರಿಟ್ ಆಧಾರದ ಮೇಲೆ ಅವರನ್ನು ಸೆಲೆಕ್ಷನ್ ಮಾಡುತ್ತೇವೆ. ಈಗ ಹೊಸ ಆಸ್ಪತ್ರೆಗಳನ್ನು ತೆಗೆಯುವಂತಹ ವಿಚಾರ ಸರ್ಕಾರದ ಮುಂದೆ ಇಲ್ಲ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಸುಮಾರು 747 ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಿರುವಂತಹ, ವಿಚಾರವನ್ನು ತಿಳಿಸಿದ್ದಾರೆ. ಈಗ ಇರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುತ್ತೀರಿ, ಆಸ್ಪತ್ರೆ ಇಲ್ಲದೆ ಇರುವಂತಹ ಗ್ರಾಮಗಳಿಗೆ ಹೊಸ ಆಸ್ಪತ್ರೆಯನ್ನು ಕೊಡಿ, ಇಲ್ಲದಿದ್ದರೆ ಒಂದು ಮೊಬೈಲ್ ಯೂನಿಟ್ ಅನ್ನು ಆದರೂ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಅಲ್ಲಿರುವ ಜಾನುವಾರುಗಳಿಗೆ ಏನು ಮಾಡಬೇಕು? ಇರತಕ್ಕ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುತ್ತೀರಿ, ಆದರೆ 10–12 ಕಿ.ಲೋ ಮೀಟರ್ ಜಾನುವಾರುಗಳು ಹೋಗಿ ಚಿಕಿತ್ಸೆ ಪಡೆಯುವುದಕ್ಕೆ ಕಷ್ಟವಾಗುತ್ತದೆ. ಅದು ಆಗಲಿಲ್ಲವೆಂದರೆ ಮೊಬೈಲ್ ಯೂನಿಟ್ ಆದರೂ ಕೊಟ್ಟು ಆ ಗ್ರಾಮಗಳಿಗೆ ಅನುಕೂಲ ಮಾಡಿಕೊಡಬೇಕು.

ಶ್ರೀ ಎಂ. ಮಹದೇವ್ : ಅವಶ್ಯಕತೆ ಇರುವ ಆಸ್ಪತ್ರೆಗಳಿಗೆ ನಾವು ಮೊಬೈಲ್ ಯುನಿಟ್‌ಗಳನ್ನು ಕೊಡುವುದಕ್ಕೆ ನಾನು ಆದೇಶವನ್ನು ಕೊಟ್ಟಿದ್ದೇನೆ.

ಹಿಂದುಳಿದ ಜಾತಿಗಳನ್ನು ಎಸ್‌ಸಿ/ಎಸ್‌ಟಿಗೆ ಸೇರಿಸುವುದು

542 (4917) : ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಕೆಲವು ಹಿಂದುಳಿದ ಜಾತಿ ಜನಾಂಗಗಳನ್ನು ಗುರುತಿಸಿ ಪ್ರವರ್ಗ 1 ಅಥವಾ ಎಸ್‌ಸಿ:ಎಸ್‌ಟಿ ಗೆ ಸೇರಿಸಲು ಸರ್ಕಾರ ಶಿಫಾರಸ್ಸು ಮಾಡಲು ಯೋಜಿಸಿದೆಯೇ; ಅವು ಯಾವುವು;

ಆ) ಇಂತಹ ಬೇಡಿಕೆಗಳು ಬಂದ ಜಾತಿಗಳು ಯಾವುವು;

ಇ) ಹಿಂದುಳಿಗ ಜಾತಿಗಳಲ್ಲಿಯ ಅತ್ಯಲ್ಪ ಪ್ರಮಾಣದಲ್ಲಿರುವ (ಕೇವಲ 5 ಲಕ್ಷಕ್ಕೂ ಕಡಿಮೆ ಜನಸಂಖ್ಯೆ ಹೊಂದಿರುವ ಉದಾ: ಮಡಿವಾಳ, ಕುಂಬಾರ, ಬೆಸ್ತರು, ಗಾಣಿಗ ಇನ್ನಿತರೆ ಜಾತಿಗಳವರನ್ನು ಗುರುತಿಸಿ ಪ್ರತ್ಯೇಕ ಗುಂಪಾಗಿ ಪರಿಗಣಿಸಿ ಪ್ರತ್ಯೇಕ ಗುಂಪಾಗಿ ಪರಿಗಣಿಸಿ ಪ್ರತ್ಯೇಕ ಗುಂಪಾಗಿ ಪರಿಗಣಿಸಿ ಪ್ರತ್ಯೇಕ ಮೀಸಲಾತಿ ನೀಡುವ ವಿಚಾರ ಸರ್ಕಾರದ ಮುಂದಿದೆಯೇ;

ಈ) ಈ ಹಿಂದೆ ಶಾಶ್ವತ ಆಯೋಗವು ಶಿಫಾರಸ್ಸು ಕೂಡ ಮಾಡಿದ್ದು ನಿಜವೇ; ಹಾಗಿದ್ದಲ್ಲಿ, ಏಕೆ ಸರ್ಕಾರ ಪರಿಗಣಿಸಲಿಲ್ಲ.

ಉ) ಮುಂದುವರೆದ ಜಾತಿಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕುರಿತು ಸರ್ಕಾರ ಯಾವ ಚಿಂತನೆ ನಡೆಸಿದೆ; (ವಿವರ ನೀಡುವುದು)

ಊ) ತುಂಬಾ ಕಡಿಮೆ ಸಂಖ್ಯೆಯಲ್ಲಿರುವ ಜನಾಂಗಗಳನ್ನು ಪ್ರತ್ಯೇಕಿಸಲು ಇರುವ ತೊಂದರೆಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಪ್ರೋ. ರವಿವರ್ಮಕುಮಾರ್ ರವರ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸಿನನ್ವಯ ಸರ್ಕಾರವು ಈಗಾಗಲೇ 16 ಜಾತಿಗಳನ್ನು ಪ್ರವರ್ಗ–1ರಲ್ಲಿ ಸೇರಿಸಿ, ದಿನಾಂಕ: 30.3.2002ರಂದು ಆದೇಶ ಹೊರಡಿಸಿದೆ.